ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಇದಿನಬ್ಬನವರ ಸಲಹೆ ಉತ್ತಮವಾದ ಸಲಹೆಯೊದರೂ ಈಗಿರತಕ್ಕ ನಿಗಮಗಳ ಒಂದು ಅನುಭವದಿಂದ ಅವುಗಳ ಕಾರ್ಯ ನಿರ್ವಹಣೆಯಿಂದ ನನಗನಿಸುತ್ತದೆ ನಿಗಮ ಸ್ಥಾಪನೆ ಮಾಡುವುದರಿಂದ ಆಷ್ಟು ಲಾಭದಾಯಕವಾಗುವುದಿಲ್ಲ ಆದರಿಂದ ಒಳ್ಳೆಯದಾಗುವುದಿಲ್ಲವೆಂದು ನನ್ನ ಅಭಿಪ್ರಾಯ ಆದರೂ ಇವರಿಗೆ ವಿಶೇಷವಾಗಿ ನೆರವು ನೀಡುವುದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಂಡು ಒಂದು ಪ್ರಾಜೆಕ್ಟ್ ತಯಾರು ಮಾಡಿ ಸಭೆಯು ಮುಂದಿಡುತ್ತೇನೆ.

೪ ರಾಜ್ಯದಲ್ಲಿ ಅಬಕಾರಿ ಕಂಟ್ರ್ಯಾಕ್ಟರು ಗಳಿಂದ ಬರಬೇಕಾದ ಬಾಕಿಯ ಬಗ್ಗೆ

ಶ್ರೀ ಜಿ. ಎಂ. ಕಾನಡೆ.—ಕರ್ನಾಟಕ ಅಬಕಾರಿ ಕಂಟ್ರ್ಯಾಕ್ಟರುಗಳಿಂದ ಸರಕಾರಕ್ಕೆ ಬರಬೇಕಾದ ಬಾಕಿಎಷ್ಟು ಬಾಕಿದಾರರ ಪೂರ್ತಿ ಹೆಸರು ವಿವರ, ವಸೂಲಿ ಮಾಡಲು ಕೈಗೊಂಡ ಕ್ರಮದ ಬಗ್ಗೆ ಅಬಕಾರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ.

೫ ರಾಜ್ಯದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿರುವವರೆಂದು ಪೋಟಾ ಸರ್ಟಿಫಿಕೇಟ್ ಕೊಟ್ಟು ಮಾಸಾಶನ ಪಡೆದಿರುವವರನ್ನು ತನಿಖೆ ಮಾಡುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರಾಗಿರುವ ಹಾಗೂ ಮಾಸಾಶನ ಪಡೆಯುತ್ತಿರುವ ಮಹಾನುಭಾವರ ಸಮ್ಮೇಳನದಲ್ಲಿ ಆಗಿರುವ ಚರ್ಚೆಯು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆಯೆಂದು ಭಾವಿಸುತ್ತೇನೆ. ಜಿಲ್ಲಾವಾರು ಸ್ವಾತಂತ್ರ್ಯ ಸಂಗ್ರಾಮದ ಸೈನಿಕರ ಹೆಸರುಗಳು ಹಾಗೂ ಪಡೆಯುತ್ತಿರುವ ಪೆನ್ಶನ್ ಬೇರೆ ಹೋದವರ ಸಂಬಂಧಿಕರಿಗೆ ಕೊಡುತ್ತಿರುವ ಪೆನ್ಷನ್ ಈ ವಿಷಯದಲ್ಲಿ ಸಂಪೂರ್ಣ ವಿವರವಾದ ಹೇಳಿಕೆಯನ್ನು ಬಯಸುತ್ತೇನೆ ಇದೇ ಸಂದರ್ಭದಲ್ಲಿ ಕೇಂದ್ರ ಸರಕಾರದಿಂದ ಬರುತ್ತಿರುವ ಮಾನಧನ, ರಾಜ್ಯ ಸರಕಾರದಿಂದ ಕೊಡುತ್ತಿರುವ ಮಾಸಾಶನ ಸ್ವಾತಂತ್ರ್ಯ ಸಿಕ್ಕು ೪೦ ವರ್ಷವಾದರೂ ಕೂಡ ನಿರ್ದಿಷ್ಟವಾಗಿ ಕಾನೂನಿನ ಅಡಿಯಲ್ಲಿ ಫಲಾನುಭವಿಗಳನ್ನ ಆಥವಾ ಮಾನಧನ ಪಡೆಯುವವರನ್ನು ಗುರುತಿಸಿ ಮಾನಧನ ಕೊಡುವುದರಲ್ಲಿ ವಿಫಲತೆ ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಸೈನಿಕರಿಗೆ ಈಗಾಗಲೇ ಕೊಟ್ಟಿರುವ ಮಾನಧನದಲ್ಲಿ ಕಾನೂನನ್ನು ಉಲ್ಲಂಘನೆ ಮಾಡಿ ಹಾಗೂ ಬೋಟ್ಟಿ ಮಾನಧನ ಪಡೆಯುತ್ತಿರುವ ಬಗ್ಗೆ ಸಿ. ಒ. ಡಿ. ತನಿಖೆ ಮಾಡಬೇಕೆಂದು ಒತ್ತಾಯಿಸಿರುತ್ತಾರೆ. ಸರಕಾರದ ಈ ವಿಷಯದಲ್ಲಿ ಗಮನ ಸೆಳೆಯುತ್ತಾ ಸದನದಲ್ಲಿ ವಿವರವಾದ ಹೇಳಿಕೆ ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಉತ್ತರವನ್ನು ಓದುತ್ತೇನೆ.

ವಿವರಣೆ

ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರ ಹಾಗೂ ಮಾಸಾಶನ ಪಡೆಯುತ್ತಿರುವ ಸಮ್ಮೇಳನ ಬೆಂಗಳೂರಿನಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಸದರಿ ಸಮ್ಮೇಳನದ ಠರಾವುಗಳು ಇತ್ಯಾದಿ ವಿವರಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಸದರಿ ಕ್ರಮ ಸಮ್ಮೇಳನದ ಠರಾವುಗಳು ಸರ್ಕಾರಕ್ಕೆ ಬಂದ ನಂತರ ಸೂಕ್ತ ತೆಗೆದುಕೊಳ್ಳಲಾಗುವುದು. ಜಿಲ್ಲಾವಾರು ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳು ಮತ್ತು ತೀರಿ ಹೋದವರ ಸಂಬಂಧಿಕರಿಗೆ ಕೊಡುತ್ತಿರುವ ಹೆಸರುಗಳು ಇತ್ಯಾದಿ ವಿವರಗಳನ್ನು ಒದಗಿಸಲು ಕಾಲಾವಕಾಶ ಬೇಕಾಗುತ್ತದೆ. ಆದಾಗ್ಯೂ ರಾಜ್ಯ ಗೌರವಧನ, ಕೇಂದ್ರ ಗೌರವಧನ ಮತ್ತು ರಾಜ್ಯ ಕೇಂದ್ರ ಗೌರವಧನಗಳೆರಡನ್ನೂ ಪಡೆಯುತ್ತಿರುವ ಜಿಲ್ಲಾವಾರು ಸಂಖ್ಯೆಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.